1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-134/2024

C.W.:-1

P.W.:-1

| | |
|---|---|
| ಸಾಕ್ಷಿದಾರನ ಹೆಸರು | ರಾಮಚಂದ್ರ ಮಗದುಮ್ಮ |
| ತಂದೆಯ ಹೆಸರು | ಸದಾಶಿವ |
| ವಯಸ್ಸು | 63 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ಯಕ್ಸಂಬಾ |

ಸಾಕ್ಷಿಗೆ ಈ ದಿನ ದಿಃ 06-05-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಫಿರ್ಯಾದಿದಾರಾದ ಮೃತ ಅಣ್ಣಪ್ಪ ಸಾತು ಮಾಳಿ ನನಗೆ ಪರಿಚಯ. ಚಾ ಸಾ 2 ರಿಂದ 12 ರವರು ನನಗೆ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ.

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಹಾತ ನಕಾಶೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಮತ್ತು ಸಾಕ್ಷಿ ಸಹಿಯನ್ನು ನಿಪಿ 2ಎ ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ನಾನು ಸದಲಗಾ ಪೊಲೀಸ ಠಾಣೆಗೆ ಬೇಟಿ ನೀಡಿದಾಗ ಪೊಲೀಸರು ಸದರಿ ನಿ ಪಿ 1 ಮತ್ತು 2 ರ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಂತರ ಸ್ಥಳಕ್ಕೆ ಕರೆದುಕೊಂಡು ಹೋಗಿ ಪೊಲೀಸರು ಒಂದು ಭಾವ ಚಿತ್ರ ತೆಗೆದಿರುತ್ತಾರೆ ಸದರಿ ಭಾವ ಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತಾವು ಇರುವುದನ್ನು ನೋಡಿ ಗುರುತಿಸಿದ್ದು ಸದರಿ ಭಾವ ಚಿತ್ರವನ್ನು ನಿಪಿ 3 ಎಂದು ಗುರುತಿಸಲಾಯಿತು. ನಿ ಪಿ 1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನಿಪಿ 3 ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎನ್ನುವುದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ18.01.2023 ರಂದು ಪೊಲೀಸರು ನನಗೆ ಮತ್ತು ಚಾಸಾ 2 ರವರಿಗೆ ಘಟನಾ ಸ್ಥಳ ಪಂಚನಾಮೆ ಕಾಲಕ್ಕೆ ಪಂಚರಾಗಲು ಕೇಳಿದ್ದರಿಂದ ನಾವು ಒಪ್ಪಿ ಕೊಂಡು ಘಟನಾ ಸ್ಥಳಕ್ಕೆ ಹಾಜರು ಆಗಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆ ದಿನ ಚಾಸಾ 5 ರವರು ತೋರಿಸಿದ ಘಟನಾ ಸ್ಥಳದಲ್ಲಿ ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ಪೊಲೀಸರು ಸಂಜೆ 4.00 ರಿಂದ 5.00 ಗಂಟೆ ವರೆಗೆ ಘಟನಾ ಸ್ಥಳ ಪಂಚನಾಮೆಯನ್ನು ಜರುಗಿಸಿ ನಿಪಿ1 ರಂತೆ ಪಂಚನಾಮೆಯನ್ನು ತಯಾರು ಮಾಡಿ ಹಾಗೂ ನಿ ಪಿ 2 ರಂತೆ ಹಾತ ನಕಾಶೆಯನ್ನು ತಗೆದು, ನಿಪಿ1 ರಲ್ಲಿ ಬರೆದಿರುವ ವಿಷಯವನ್ನು ನನಗೆ ಹಾಗೂ ಚಾಸಾ 2 ರವರಿಗೆ ಓದಿ ಹೇಳಿ ನಿಪಿ1 ಮತ್ತು 2 ರ ಮೇಲೆ ನನ್ನ ಹಾಗೂ ಚಾಸಾ 2 ರವರ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಂದರ್ಬದಲ್ಲಿ ನಿಪಿ 3 ರಂತೆ ಭಾವ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜೆ ಬಿ ಆರ್ ವಕೀಲರಿಂದಃ**

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-134/2024
C.W.:-3
P.W.:-2

| | |
|---|---|
| ಸಾಕ್ಷಿದಾರನ ಹೆಸರು | ಸುಲಾಬಾಯಿ ಮಾಳಿ |
| ಗಂಡನ  ಹೆಸರು | ಅಣ್ಣಪ್ಪ |
| ವಯಸ್ಸು | 70 ವರ್ಷ |
| ಕೆಲಸ | ಮನೆಕೆಲಸ |
| ವಾಸ | ಯಕ್ಸಂಬಾ |

ಸಾಕ್ಷಿಗೆ ಈ ದಿನ ದಿಃ 06-05-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಮೃತ ಅಣ್ಣಪ್ಪ ಸಾತು ಮಾಳಿ, ಚಾಸಾ 1 ಮತ್ತು 2 ಪರಿಚಯ. ಚಾಸಾ 4 ನನ್ನ ಮೈದುನ ಮಗ. ಚಾಸಾ 5 ನಾದನಿಯ ಮಗ. ಚಾಸಾ 6 ರಿಂದ 12 ನಮ್ಮ ಸಂಬಂಧಿಕರು. ಆರೋಪಿತರ ಪರಿಚಯ ಇರುತ್ತದೆ.

ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈಗ ಸುಮಾರು 1 ವರ್ಷದ ಹಿಂದೆ ನಮ್ಮ ಅಡವಿಯಲ್ಲಿ 4 ನೇ ಆರೋಪಿತನು ನೇಗಿಲು ಹೊಡೆಯುತ್ತಿದ್ದನು. ಆಗ ಸುವರ್ಣಾ ಮಾಳಿ ಇವಳು 4 ನೇ ಆರೋಪಿತನಿಗೆ ನಮ್ಮ ಅಡವಿಯಲ್ಲಿ ಯಾಕೆ ನೇಗಿಲು ಹೊಡೆಯುತ್ತಿದ್ದಿಯಾ ಅಂತಾ ಕೇಳಿದಾಗ ಅವರು ನೇಗಿಲು ಹೊಡೆಯುವುದನ್ನು ಬಿಟ್ಟಿರುವುದಿಲ್ಲ ಅದಕ್ಕೆ ನಾವು ಆರೋಪಿತರ ವಿರುದ್ಧ ಫಿರ್ಯಾದಿಯನ್ನು ನೀಡಿರುತ್ತೇವೆ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ   ಸಸಅ ರವರಿಂದಃ**

ದಿಃ17.01.2023 ರಂದು 11.00 ಗಂಟೆಗೆ ನನ್ನ ಗಂಡ ಮನೆಯ ಹತ್ತಿರ ಮೇವು ತರಲು ಹೋಗಿರುತ್ತಾರೆ, ಮನೆಯಲ್ಲಿ ನಾನು ಮತ್ತು ನಮ್ಮ ಸಂಬಂಧಿಕರಾದ ಚಾಸಾ 5,8 ರಿಂದ 12 ಕೂಡಿಕೊಂಡು ನಮ್ಮ ಮನೆಯಲ್ಲಿ ಇದ್ದೇವು ಆಗ 11.30 ಗಂಟೆ ಸುಮಾರಿಗೆ ನನ್ನ ಗಂಡ ಅಣ್ಣಪ್ಪ ಮಾಳಿ ಇವರ ಒಧ್ರಾಡುವ ಸಪ್ಪಳ ಕೇಳಿ ಬಂದಿರುತ್ತದೆ ಎಂದರೆ ಸರಿಯಲ್ಲ. ಆಗ ನಾವೆಲ್ಲರೂ ನನ್ನ ಗಂಡನ ಹತ್ತಿರ ಹೋಗಿ ಏನಾಯಿತು ಅಂತಾ ವಿಚಾರಿಸಲಾಗಿ ನಮ್ಮ ಜಮೀನಿನ ದಕ್ಷಿಣಕ್ಕೆ ಇರುವ 4 ನೇ ಆರೋಪಿತನ ಸರ್ವೆ ನಂಬರ 367/1ಬ ಜಮೀನಿನಲ್ಲಿ ದಬ್ಬಾಳಿಕೆಯಿಂದ ಟ್ರ್ಯಾಕ್ಟರ ಹೊಡೆಯಲು 1 ನೇ ಆರೋಪಿತಳು ಪ್ರಚೋದನೆ ನೀಡಿರುತ್ತಾಳೆ ಎಂದರೆ ಸರಿಯಲ್ಲ. ಅದೇ ರೀತಿ ಕಾಶಿಬಾಯಿ ಹಾಗೂ 2 ಮತ್ತು 3 ನೇ ಆರೋಪಿ ನನಗೆ ಅಡ್ಡಗಟ್ಟಿ ತರಬಿ ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಅವರಿಗೆ ಟ್ರ್ಯಾಕ್ಟರ ಹೊಡೆಯದಂತೆ ತಿಳಿಸಿದರೂ ಸಹ ತಂಟೆ ತಕರಾರು ಮಾಡುತ್ತಿದ್ದಾರೆ ಅಂತಾ ನನ್ನ ಗಂಡ ನನಗೆ ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ 5,8 ರಿಂದ 12 ಸೇರಿ ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ ಆರೋಪಿತರು ಮರಳಿ ಹೋಗಿರುತ್ತಾರೆ ಮತ್ತು ಈ ವಿಷಯದ ಕುರಿತು ನನ್ನ ಗಂಡ ಪೊಲೀಸರಿಗೆ ಫಿರ್ಯಾದಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಿಃ18.01.2023 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ "ಹೀಗಿರುವಾಗ ದಿಃ17.01.2023 ರಂದು.......... ಕೇಳಿ ಗೊತ್ತಾಗಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 4 ಎಂದು ಗುರುತಿಸಲಾಯಿತು.

ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜೆ ಬಿ ಆರ್ ವಕೀಲರಿಂದಃ**

4ನೇ ಆರೋಪಿತನು ಯಾವ ಟ್ರ್ಯಾಕ್ಟರ ತೆಗೆದುಕೊಂಡು ಬಂದಿರುತ್ತಾರೆ ಮತ್ತು ಅದರ ನಂಬರ ನನಗೆ ಹೇಳಲು ಆಗುವುದಿಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ